

# ಸಂಧ್ಯಾ ಕಾಲ

ನೀಡುತಿದೆ ಕೆಂಬಣ್ಣದ  ಚೆಲುವ
ಪಡುವಣದ ಸೂರ್ಯಾಸ್ತದ ಸಮಯ
ಜಡತೆಯ ನಿವಾರಿಸಿ ವಾತಾವರಣಕೆ
ನೀಡಿದೆ ಶಕ್ತಿ ಜೀವರಾಶಿಗಳಿಗೆ

ಅಂಬರದಲಿ ಪ್ರಜ್ವಲಿಸಿದ ರವಿ ತಾ
ಅಂಬಕ ದೃಷ್ಟಿಯಿಂ ದೂರ ದಿಗಂತದಲಿ
ಅಂಬುಜನಾಭನ ಸ್ಮರಣಾ ಕಾಲದಿ
ಅಂಭೋದದಲಿ ಮರೆಯಾದ ಸಂಧ್ಯಾ ಕಾಲದಲಿ

ಸಾಗುತಲಿ ಅಪ್ಪನ ಅಪ್ಪುಗೆಯಲಿ
ಸೊಗಸು ಈ ಒಂಟೆಯ  ಸವಾರಿ
ಮಗುವಿನ ಮನರಂಜನೆಯ ನೋಟ
ನಗುಮುಖದ ತುಂಟನಾ ಆಟ

ಕಡಲ ತೀರದಲಿ ಜನ ಸಂದಣಿ
ಆಡುತ ನಲಿಯುತ  ಭೂರಮೆಯ
ಸೌಂದರ್ಯದಿ
ಸುಡು ಬೇಸಿಗೆಯ ಶಾಖ ಶಮನಕೆ
ಬಿಡುವಿನ ವೇಳೆಯಲಿ ಸಂತಸದಿ

**-ಎನ್. ಶಂಕರ ರಾವ್, ಬೆಂಗಳೂರು**

# ಜನವೋ ಜನ ಸಾಗರ

ನೆರೆದಿಹದಿಲ್ಲಿ ಜನಜಾತ್ರೆ ಸಾಗರ ತೆರದಿ
ಆಸ್ವಾದಿಸಲು ತವಕಿತರಿಲ್ಲಿ ಸೂರ್ಯಾಸ್ತಮ
ಸಾಗರ ತೀರದಿ
ಮರಳುಗಾಡಿನ ಹಡಗು ಆಗಿಹುದಿಲ್ಲಿ
ಮಗುವಿನ ರಂಜನೆ
ಅಪ್ಪನ ಅಪ್ಪುಗೆಯೊಳ್ ಜಗಮರೆತ ಮಗ

ದಿಗಂತವಿಲ್ಲಿ ಮೈ ಚಾಚಿಹುದು ಜಲಧಿಯ
ಸಾಟಿಯಿಲ್ಲದೇ
ಬಾನ ಕೆಂಪಿಗೆ ಅರುಣನ ಕಾರುಬಾರು
ಸಮನಾರಿಲ್ಲದೇ
ಸದ್ದಿಲ್ಲದೇ ಜಾರುವ ರವಿಯ ಕಣ್ಣಾ
ಮುಚ್ಚಾಲೆ ಬಾನ ಅಂಚಲೇ
ಎಲ್ಲರದೂ ಒಂದೊಂದು ನೋಟ, ಮಾಟ
ಮರಳಿನ ಸಂಗದಲೇ

ಹಾರಿ ಹೋಗಿಹುದಿಲ್ಲಿ ಬಾಳ ಜಂಜಾಟ
ನಿಸರ್ಗದ ಮಡಿಲಲ್ಲಿ
ಮೂರುದಿನದ ತಾಪತ್ರಯಕ್ಕೆ ಹೊಂಚೇ ಇಲ್ಲ
ಜಲಧಿಯ ಅಡಿಯಲ್ಲಿ
ಮೈ ಮರೆತ ಜನಸಮೂಹ ವಾಚಾಳಿಯಾದ
ಕಡಲ ಅಲೆಗಳಲ್ಲಿ

ಮೂರುದಿನದ ಸಂತೆಯ ಗೋಜು ಗದ್ದಲ
ಒಂದು ಇಲ್ಲ
ನೇಸರನ ಆ ಮೋಹಕ ದೃಶ್ಯ ಮರೆಮಾಚಿದೆ
ಚಿಂತೆ ಎಲ್ಲ
ಸಂಜೆ ಇಳಿದು ರಜನಿಯ ಆಗಮನ ಮನೆಗೆ
ಮರಳಬೇಕಲ್ಲ

ಮನೆಗೆ ಮರಳುವ ಮುನ್ನ
ನೆನೆಯೊಮ್ಮೆ ನಿಸರ್ಗವನು
ಅಂಥ ಅದ್ಭುತ ಬೇರೆ ಉಂಟೇ ಜಗದಲಿ

**-ಶಿವಮ್ಮ ಎಸ್.ಜಿ., ಕೊಪ್ಪಳ**